ಇ) ಸರ್ಕಾರಿ ನೌಕರರ ವರ್ಗಾವಣೆಗಳ ಬಗ್ಗೆ ಹೊಸ ನೀತಿಯನ್ನು ದಿನಾಂಕ: 22.11.2001 ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್ ಟಿಆರ್ 2001ರಲ್ಲಿ ರೂಪಿಸಲಾಗಿದೆ.

ಸರ್ಕಾರಿ ನೌಕರರು ವೃತ್ತಿ ಗೌರವದೊಂದಿಗೆ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಲು ಪಾರದರ್ಶಕತೆ, ವೈಜ್ಞಾನಿಕ ನೇಮಕಾತಿ ವಿಧಾನಗಳು, ಯುಕ್ತವಾಗಿರುವ ಕಛೇರಿ ಕಾರ್ಯ ವಿಧಾನಗಳು, ವಿಕೇಂದ್ರೀಕರಣ, ಅಧಿಕಾರ ಪ್ರತ್ಯಾ ಯೋಜನೆ, ಸಾರ್ವಜನಿಕ ಹಿತ ವ್ಯವಸ್ಥೆ ಇತ್ಯಾದಿಗಳನ್ನು ಆಡಳಿತ ಯಂತ್ರದಲ್ಲಿ ಅಳವಡಿಸಲಾಗಿದೆ.

ಹುಬ್ಬಳ್ಳಿ-ಧಾರವಾಡದಲ್ಲಿ ಯು.ಜಿ.ಡಿ. ಕಾರ್ಯಯೋಜನೆ

4391 (5107) : ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಂತರದ ಎರಡನೇ ಮಹಾನಗರದ ಯು.ಜಿ.ಡಿ.ಯ ಕೆಲಸಗಳು ಯಾವ ವರ್ಷದಲ್ಲಿ ನಡೆದಿದೆ. ಈಗಿನ ಅಗತ್ಯತೆಯ ಪ್ರಕಾರ ಯಾವ ಯೋಜನೆ ಮಾಡಿದೆ; ವಿವರ ನೀಡುವುದು;

ಆ) ಮಹಾನಗರ ಬೆಳವಣಿಗೆ ಗಮನಿಸಿ ಯು.ಜಿ.ಡಿ.ಯ ಕಾರ್ಯ ಮಾಡಲು ಹಣದ ಅಗತ್ಯತೆ ಎಷ್ಟು; ಅದಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ;

ಇ) ಮಹಾನಗರದ ಕುಡಿಯುವ ನೀರಿನ ಸರಬರಾಜಿನಲ್ಲಿ ಇರುವ ಸಮಸ್ಯೆ ಬಗೆಹರಿಸುವ ಯೋಜನೆ ಮಾಡಿದೆಯೇ?

ಈ) ಬೆಂಗಳೂರಿನಷ್ಟೇ ಧಾರವಾಡ-ಹುಬ್ಬಳ್ಳಿಗೆ ಮೂಲಭೂತ ಸೌಲಭ್ಯ ಒದಗಿಸುವುದರಲ್ಲಿ ಯಾವ ಯಾವ ಯೋಜನೆಗಳು ಜಾರಿಯಲ್ಲಿವೇ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) 1961-62ನೇ ಸಾಲಿನಲ್ಲಿ ನಡೆದಿದೆ. ಈಗಿನ ಅಗತ್ಯತೆಯ ಪ್ರಕಾರ ಯೋಜನೆ ಮಾಡಿಲ್ಲ. ಮಹಾನಗರಕ್ಕೆ ಪರಿಪೂರ್ಣವಾದ ಸಮಗ್ರ ಒಳಚರಂಡಿ ಯೋಜನೆಯನ್ನು ತಯಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯನ್ನು ಕೋರಲಾಗಿದೆ.

ಆ) ಜಲಮಂಡಳಿಯಿಂದ ಯೋಜನೆ ತಯಾರಾದ ಮೇಲೆ ಅಂದಾಜು ವೆಚ್ಚ ತಿಳಿಯುವುದು.

ಇ) ಹೌದು.

ಈ) ಮಲಪ್ರಭಾ ಹಾಗೂ ನೀರಸಾಗರ ನೀರು ಪೂರೈಕೆ ಯೋಜನೆಗಳ ತುರ್ತು ಸುಧಾರಣಾ ಯೋಜನೆಗಳು ಜಾರಿಯಲ್ಲಿರುತ್ತವೆ.

ರಾಜ್ಯದಲ್ಲಿ ಮಾರಾಟ ತೆರಿಗೆಯಿಂದ ಬಂದಿರುವ ಆದಾಯ

4392 (5108) : ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾರಾಟ ತೆರಿಗೆಯಿಂದ 1982, 1984 ಮತ್ತು 1985, 1989, 1994 ಹಾಗೂ 2003 ವರ್ಷದ ಕೊನೆಯವರೆಗೆ ಬಂದಿರುವ ಆದಾಯದ ವಿವರ ನಿಡುವುದು;